# ಕರ್ನಾಟಕ ವಿಧಾನ ಪರಿಷತ್ತು
## ನೂರ ಮೂವತ್ತಮೂರನೆಯ ಅಧಿವೇಶನ
## (ಮುಂದುವರೆದ ಉಪವೇಶನಗಳು)

**<u>ಕಾರ್ಯಕಲಾಪಗಳ ಪಟ್ಟಿ</u>**

**ಮಂಗಳವಾರ, ದಿನಾಂಕ: 21ನೇ ನವೆಂಬರ್, 2017**
**(ಸಮಯ: ಬೆಳಗ್ಗೆ: 11.00 ಗಂಟೆಗೆ)**

* * *

### 01. ಪ್ರಶ್ನೋತ್ತರ

| | | | |
|---|---|---|---|
| **ಅ.** | ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು | : | ಮೂವತ್ತನೆಯ ಪಟ್ಟಿ |
| **ಆ.** | ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು | : | ಮೂವತ್ತನೆಯ ಪಟ್ಟಿ |

### 02. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**ಕಾರ್ಯದರ್ಶಿಯವರು:-**

**ಅ.** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ **2017ನೇ ಸಾಲಿನ** "**ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕ**";

**ಆ.** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ **2017ನೇ ಸಾಲಿನ** "**ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ವಿಧೇಯಕ**"ಗಳನ್ನು ಸಭೆಯ ಮುಂದಿಡುವುದು.

### 03. ವರದಿಗಳನ್ನೊಪ್ಪಿಸುವುದು

**ಅ. ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್** (ಸದಸ್ಯರು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ) ಅವರು **2016-2017ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ ಮೂವತ್ತೆರಡನೆಯ** ವರದಿಯನ್ನು ಒಪ್ಪಿಸುವುದು.

**ಆ. ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್)** (ಸದಸ್ಯರು, ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ) ಅವರು **2016-2017ನೇ ಸಾಲಿನ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಇಪ್ಪತ್ತ ನಾಲ್ಕನೆಯ** ವರದಿಯನ್ನು ಒಪ್ಪಿಸುವುದು.

**ಇ. ಶ್ರೀ ವಿ. ಸೋಮಣ್ಣ** (ಸದಸ್ಯರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ) ಅವರು **2016-2017ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಹತ್ತನೆಯ** ವರದಿಯನ್ನು ಒಪ್ಪಿಸುವುದು.

### 04. ಅರ್ಜಿಗಳನ್ನೊಪ್ಪಿಸುವುದು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ** ಅವರು:-

(ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಗ್ರಾಮದ **ಶ್ಯಾಮಿಹಕ್ಲು ಹಾಗೂ ಹರಳಹಕ್ಲು** ಜನವಸತಿ ಪ್ರದೇಶಗಳಿಗೆ ರಸ್ತೆ ಸಂಪರ್ಕ ಒದಗಿಸುವ ಬಗ್ಗೆ;

.....2

(ಆ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಗ್ರಾಮದ **ಶ್ಯಾಮಿಹಕ್ಲು** ಜನವಸತಿ ಪ್ರದೇಶದ ಕೃಷಿ ಜಮೀನಿಗೆ ನೀರನ್ನು ಒದಗಿಸುವ ಕಿಂಡಿ ಅಣೆಕಟ್ಟು ಮತ್ತು ನೀರಿನ ಚಾನಲ್ ಅನ್ನು ದುರಸ್ಥಿಪಡಿಸಿ, ಪುನರ್ ನಿರ್ಮಿಸುವ ಬಗ್ಗೆ;

(ಇ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಗ್ರಾಮದ **ಹರ್ಲಕ್ಲು** ಜನವಸತಿ ಪ್ರದೇಶದ ಕೃಷಿ ಜಮೀನಿಗೆ ನೀರನ್ನು ಒದಗಿಸುವ ಕಿಂಡಿ ಅಣೆಕಟ್ಟು ಮತ್ತು ನೀರಿನ ಚಾನಲ್ ಅನ್ನು ದುರಸ್ಥಿಪಡಿಸಿ, ಪುನರ್ ನಿರ್ಮಿಸುವ ಬಗ್ಗೆ ಅರ್ಜಿಗಳನ್ನು ಒಪ್ಪಿಸುವುದು.

## ೦೫. ಗಮನ ಸೆಳೆಯುವ ಸೂಚನೆಗಳು

**ಶ್ರೀಮತಿ ಮೋಟಮ್ಮ** ಅವರು ಮೂಡಿಗೆರೆ ಕೇಂದ್ರದಿಂದ ಕಳಸಾ 100 ಕಿ.ಮೀ. ದೂರದಲ್ಲಿದ್ದು, ಜನ ಸಾಮಾನ್ಯರಿಗೆ ಮೂಡಿಗೆರೆ ಕೇಂದ್ರಕ್ಕೆ ಹೋಗಿ ಬರಲು ತೊಂದರೆಯಾಗುತ್ತಿರುವುದರಿಂದ, ಕಳಸಾ ಗ್ರಾಮವನ್ನು ತಾಲ್ಲೂಕೆಂದು ಘೋಷಿಸುವ ಬಗ್ಗೆ **ಮಾನ್ಯ ಕಂದಾಯ ಸಚಿವರ** ಗಮನ ಸೆಳೆಯುವುದು.

## ೦೬. ನಿಯಮ ೩೩೦ರ ಮೇರೆಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಪಿ.ಎಫ್., ಇ.ಎಸ್.ಐ. ಸೌಲಭ್ಯ, ಬಾಪೂಜಿ ಸೇವಾ ಕೇಂದ್ರಗಳಿಗೆ ಕಂಪ್ಯೂಟರ್ ಒದಗಿಸುವುದು, ಈ-ಸ್ವತ್ತುಗಳಲ್ಲಿನ ಗೊಂದಲ ನಿವಾರಣೆ, ಪಿ.ಡಿ.ಓ. ಹುದ್ದೆಗಳನ್ನು ಮೇಲ್ದರ್ಜೆಗೇರಿಸುವುದು ಇತ್ಯಾದಿ ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

## ೦೭. ವಿಶೇಷ ಪ್ರಸ್ತಾವ

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 161ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸಿನ ಅನ್ವಯ ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಚರ್ಚೆ.

## ೦೮. ನಿಯಮ ೬೮ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

**ಶ್ರೀ ಕೆ.ಬಿ. ಶಾಣಪ್ಪ ಹಾಗೂ ಇತರರು** ಗುಂಡಿಗಿರ್ತಿ ಹೋಬಳಿ, ಚಿತ್ತಾಪುರ ತಾಲ್ಲೂಕಿಗೆ ಸಂಬಂಧಪಡುವ ಸಾವತ್‌ಕೇಡು, ಜೀವನ್‌ಮಾಡಗಿ, ಚೊಂಚಿ, ಕಮತ್‌ನೂರು, ನಿಪ್ಪಾಣಿ ಹಾಗೂ ಇನ್ನಿತರೆ ಹಳ್ಳಿಗಳನ್ನು ಚಿತ್ತಾಪುರ ತಾಲ್ಲೂಕಿಗೆ ಒಳಪಡಿಸಿ ಹೆಚ್ಚಿನ ಅನುಕೂಲ ಮಾಡಿಕೊಡುವ ಬಗ್ಗೆ ಪ್ರಸ್ತಾಪಿಸುವುದು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ(ಪ್ರ)**

---